ಬಡತನ ರೇಖೆಗಿಂತ ಕೆಳಗಿನ ಪಟ್ಟಿಯಲ್ಲಿರುವ ದೋಷಗಳು.

1795(2606)

ಶ್ರೀ ಗೋಪಾಲ ಭಂಡಾರಿ ಹೆಚ್.(ಕಾರ್ಕಳ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಪಿಎಲ್ (ಬಡತನ ರೇಖೆಗಿಂತ ಕೆಳಗಿನ) ಪಟ್ಟಿ ಎರಡು ವರ್ಷಗಳ ಹಿಂದೆ ಮಾಡಿದ್ದು, ಅದರಲ್ಲಿ ಸಾಕಷ್ಟು ದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪಟ್ಟಿಯನ್ನು ಪುನರ್ ಪರಿಶೀಲಿಸಲು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಸುತ್ತೋಲೆ ಹೋಗಿದ್ದು, ಈಗ ಅದನ್ನು ಪುನರ್ ಪರಿಶೀಲಿಸಲಾಗಿದೆಯೇ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು.

ಆ) ಜಿಲ್ಲೆಗಳಲ್ಲಿ ಗ್ರಾಮಸಭೆಗಳನ್ನು ಕರೆದು ಬಿಪಿಎಲ್ ಪಟ್ಟಿಯನ್ನು ನಿಯಮಾನುಸಾರ ಪುನರ್ ಪರಿಶೀಲಿಸಲಾಗುತ್ತಿದೆ.

ರಾಜ್ಯದಾದ್ಯಂತ ವೈದ್ಯರುಗಳ ಆಯ್ಕೆ ಪ್ರಕ್ರಿಯೆಗಳು.

1796(1872)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ರಾಜ್ಯದಾದ್ಯಂತ ತಾತ್ಕಾಲಿಕ ವೈದ್ಯರುಗಳ ಆಯ್ಕೆ ನಡೆದಿದ್ದು, 1997-98ರ ಸಾಲಿನಲ್ಲಿ ಖಾಯಂ ಆಗಿ ಆಯ್ಕೆಯಾದ 400 ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು, ಆಯ್ಕೆಯಾಗಿ ಇವರೆಲ್ಲಾ ಈವರೆಗೆ ಪ್ರೊಬೇಷನರಿಯಾಗಿಯೇ ಕೆಲಸ ನಿರ್ವಹಿಸುತ್ತಿರುವುದು ನಿಜವೆ?

ಆ) ಕುಂದಾಪುರ ತಾಲ್ಲೂಕಿಗೆ ಒರ್ವ ವೈದ್ಯಾಧಿಕಾರಿಗೆ ಖಾಯಂ ಮಾಡಿರುವುದು ನಿಜವೆ?